ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ 2015–16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ರಾಯಚೂರು ಜಿಲ್ಲೆಗೆ ಒಟ್ಟು 56 ಹೆಚ್ಚುವರಿ ಕೊಠಡಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಈ) MHRDಯಿಂದ ಎಸ್.ಎಸ್.ಎ ಯೋಜನೆಗಾಗಿ ಅನುಮೋದಿತ ಶಾಲಾಪಟ್ಟಿ ಮತ್ತು ಅನುದಾನದ ವಿವರ ಬಂದ ನಂತರ ಕೊಠಡಿ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು.

ಸದರಿ ಕಾಮಗಾರಿಗಳು ಕೇಂದ್ರ ಸರ್ಕಾರದಿಂದ ಆರ್.ಎಂ.ಎಸ್.ಎ ಯೋಜನೆಯಡಿ ಮಂಜೂರು ಆಗಿರುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾರ್ಯಕ್ರಮಗಳು

1416(2086); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ಪ್ರಸಕ್ತ ಸಾಲಿನಲ್ಲಿ ವಾರ್ತಾ ಇಲಾಖೆಗೆ ನಿಗದಿ ಪಡಿಸಲಾಗಿರುವ ಅನುದಾನವೆಷ್ಟು; ಯಾವ ಯೋಜನೆಗಳಿಗೆ ಅನುದಾನ ನಿಗದಿಪಡಿಸಲಾಗಿದೆ;

ಆ) ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾಗಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಇ) ಕಾರ್ಯಕ್ರಮಕ್ಕೆ ನಿಗದಿ ಪಡಿಸಿದ ಅನುದಾನವೆಷ್ಟು; ಸದರಿ ಕಾರ್ಯಕ್ರಮಗಳಿಗೆ ನಿಗದಿಯಾದ ಅನುದಾನದಲ್ಲಿ ಬಳಕೆಯಾದ ಹಾಗೂ ಬಳಕೆಯಾಗದ ಅನುದಾನ ವೆಷ್ಟು; ಬಳಕೆಯಾಗದಿರಲು ಕಾರಣಗಳೇನು;

ಈ) ಅರ್ಹ ಫಲಾನುಭವಿಗಳಿಗೆ ಬಳಕೆಯಾಗದ ಅನುದಾನವನ್ನು ಪುನಃ ಬಳಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ;

ಉ) ಯೋಜನೆಗಳಿಗೆ ಫಲಾನುಭವಿ ವಿದ್ಯಾರ್ಥಿಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನಿಗದಿಪಡಿಸಿರುವ ಅನುದಾನ ಒಟ್ಟು ರೂ. 9306.00 ಲಕ್ಷಗಳು ಯೋಜನೆಗಳಿಗೆ ನಿಗದಿಪಡಿಸಲಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ;

ಆ) ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆರ್ಥಿಕ ವರ್ಷ	ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು
2012–13	• ಮಾಧ್ಯಮ ದರ್ಶನ • ವಿಡಿಯೋ ಚಿತ್ರೀಕರಣ ಮತ್ತು ಸಂಕಲನದಲ್ಲಿ ಪದವೀಧರ ಅಭ್ಯರ್ಥಿಗಳಿಗೆ ಮೈಸೂರು ವಿಶ್ವವಿದ್ಯಾಲಯದ ಇಎಂಆರ್‌ಸಿ ಕೇಂದ್ರದಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿತ್ತು.
2013–14 (2012–13ರ ಬ್ಯಾಕ್‌ಲಾಗ್)	• ಅಂತರ್ ಜಿಲ್ಲಾ ಪ್ರವಾಸ

2013–14	• ಪತ್ರಿಕೋದ್ಯಮ ಪದವಿ ವಿದ್ಯಾರ್ಥಿಗಳಿಗೆ ವೃತ್ತಿ/ನಿರೂಪಣೆ ಕೌಶಲ್ಯ ತರಬೇತಿ • ವಿಡಿಯೋ ಚಿತ್ರೀಕರಣ ಮತ್ತು ಸಂಕಲನದಲ್ಲಿ ಪದವೀಧರ ಅಭ್ಯರ್ಥಿಗಳಿಗೆ ಮೈಸೂರು ವಿಶ್ವವಿದ್ಯಾಲಯದ ಇಎಂಆರ್‌ಸಿ ಕೇಂದ್ರದಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿತ್ತು.
2014–15	• ಪತ್ರಿಕೋದ್ಯಮ ಪದವಿ ವಿದ್ಯಾರ್ಥಿಗಳಿಗೆ ಡಿಜಿಟಲ್ ಕ್ಯಾಮೆರ ಹಾಗೂ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸೌಲಭ್ಯ ನೀಡಲಾಗಿದೆ. • ವಿಡಿಯೋ ಚಿತ್ರೀಕರಣ ಮತ್ತು ಸಂಕಲನದಲ್ಲಿ ಪದವೀಧರ ಅಭ್ಯರ್ಥಿಗಳಿಗೆ ಮೈಸೂರು ವಿಶ್ವ ವಿದ್ಯಾಲಯದ ಇಎಂಆರ್‌ಸಿ ಕೇಂದ್ರದಲ್ಲಿ ತರಬೇತಿ ನೀಡಲಾಯಿತು • ಎಲೆಕ್ಟ್ರಾನಿಕ್ ಪದವೀಧರ ಅಭ್ಯರ್ಥಿಗಳಿಗೆ ಸ್ಥಿರ ಕ್ಯಾಮೆರಾ (Still Camera) ಗಳನ್ನು ವಿತರಣೆ ಮಾಡಿ ವೃತ್ತಿ ಕೌಶಲ್ಯ ತರಬೇತಿ ನೀಡಲಾಗಿದೆ.

ಇ) ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಅನುದಾನ, ಬಳಕೆಯಾದ ಹಾಗೂ ಬಳಕೆಯಾಗದ ಅನುದಾನದ ವಿವರ: (ರೂ. ಲಕ್ಷಗಳಲ್ಲಿ)

ವಿವರಗಳು	2012–13	2013–14	2014–15
ಒದಗಿಸಿದ ಅನುದಾನ	20.00	33.00	104.71
ವೆಚ್ಚವಾದ ಅನುದಾನ	20.00	29.00	83.42
ಉಳಿಕೆ	ಇಲ್ಲ	4.00	21.29

ಬಳಕೆಯಾಗದಿರಲು ಕಾರಣ:

ಕಾರ್ಯಕ್ರಮವು ನೂತನವಾಗಿ ಚಾಲನೆಗೊಂಡಿದ್ದ ಕಾರಣದಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಫಲಾನುಭವಿಗಳು ದೊರೆಯದಿದ್ದ ಕಾರಣ ಅನುದಾನ ಉಳಿಕೆಯಾಗದಿರುತ್ತದೆ.

ಈ) ಬಳಕೆಯಾಗದ ಅನುದಾನವನ್ನು ಪುನಃ ಬಳಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಉ) ಯೋಜನೆಗಳಿಗೆ ಫಲಾನುಭವಿ ವಿದ್ಯಾರ್ಥಿಗಳನ್ನು ಮೆರಿಟ್, ಮಹಿಳಾ ಮೀಸಲಾತಿ, ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯದ ಮೀಸಲಾತಿ, ಇತರೆ ಜಿಲ್ಲೆಗಳ ಮೀಸಲಾತಿಯನ್ವಯ ಆಯ್ಕೆ ಮಾಡಲಾಗಿದೆ. ಆದರೆ, ಫಲಾನುಭವಿ ವಿದ್ಯಾರ್ಥಿಗಳನ್ನು ಜಿಲ್ಲಾವಾರು ಆಯ್ಕೆ ಮಾಡಿರುವುದಿಲ್ಲ.

ಅನುಬಂಧ

ಕ್ರ.ಸಂ.	ಲೆಕ್ಕಶೀರ್ಷಿಕೆ / ಕಾರ್ಯಕ್ರಮ	ಯೋಜನೆ	ಯೋಜನೇತರ	ಒಟ್ಟು
1	ಚಲನಚಿತ್ರ ನಿರ್ಮಾಣ 2220–01–105–0–01–059	300.00	855.00	1155.00
2	ಕನ್ನಡ ಚಲನಚಿತ್ರ ಅಕಾಡೆಮಿ 2220–01–105–0–02–101	133.00	---	133.00
3	ಅಂತರರಾಷ್ಟ್ರೀಯ ಚಲನಚಿತ್ರೋತ್ಸವ 2220–01–105–0–03–059	250.00	---	250.00
4	ಡಾ॥ ರಾಜ್‌ಕುಮಾರ್ ಸ್ಮಾರಕ ನಿರ್ಮಾಣ 2220–01–800–0–14–100	25.00	---	25.00
5	ನಿರ್ದೇಶನ ಮತ್ತು ಆಡಳಿತ 2220–60–001–0–01–059	126.00	1108.00	1234.00
6	ವಾರ್ತಾ ಕೇಂದ್ರಗಳು 2220–60–102–0–00–059	100.00	140.00	240.00
7	ಪತ್ರಿಕೆ ಮತ್ತು ವಾರ್ತಾ ಸೇವೆಗಳು 2220–60–103–0–01–059	100.00	113.00	213.00

8	ಪತ್ರಕರ್ತರ ಕಲ್ಯಾಣ ಕಾರ್ಯಕ್ರಮಗಳು 2220–60–105–0–01–059	100.00	48.00	148.00
9	ಜನಸಂಪರ್ಕ ಮತ್ತು ಕ್ಷೇತ್ರ ಪ್ರಚಾರ 2220–60–106–0–04–059 9(ಎ) 2220–60–106–0–04–422 (ಪ.ಜ.ಉ.ಯೋ) 9(ಬಿ) 2220–60–106–0–04–423 (ಗಿ.ಉ.ಯೋ)	940.00 240.00 30.00	2684.00	3894.00
10	ಪ್ರಕಟಣೆಗಳು 2220–60–110–0–00–059	1059.00	179.00	1238.00
11	ವಾರ್ತಾ ಮತ್ತು ಪ್ರಚಾರ ಮೇಲಣ ಬಂಡವಾಳ ವೆಚ್ಚ 4220–60–101–0–00–139	167.00	––	167.00
12	ಪತ್ರಿಕಾ ಭವನ ನಿರ್ಮಾಣ 4220–60–101–0–01–386	5.00	––	5.00
13	ಕನ್ನಡ ಚಲನಚಿತ್ರ ಅಮೃತ ಮಹೋತ್ಸವ ಭವನ ನಿರ್ಮಾಣ 4220–60–101–0–02–386	250.00	––	250.00
14	ಕಂಠೀರವ ಸ್ಟುಡಿಯೋಗೆ ನೆರವು 4220–01–190–1–00–386	45.00	––	45.00

15	ಛಾಯಾಚಿತ್ರ ಸೇವೆಗಳು 220–60–109–0–00	---	51.00	51.00
16	ಆದರ್ಶ ಮತ್ತು ವಿಜಯಾ ಚಲನಚಿತ್ರ ಸಂಸ್ಥೆ 2220–01–800–0–06	---	5.00	5.00
17	ಮದ್ಯಪಾನ ಸಂಯಮ ಮಂಡಳಿ 2220–60–101–0–04	---	153.00	153.00
18	ಕರ್ನಾಟಕ ಪತ್ರಿಕಾ ಅಕಾಡೆಮಿ 2220–60–103–0–03	---	100.00	100.00
	ಒಟ್ಟು	**3870.00**	**5436.00**	**9306.00**